ಹನಿ ನೀರಾವರಿಗೆ ಅನುದಾನ ಬಿಡುಗಡೆ

638(724); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ 2014–15ನೇ ಸಾಲಿಗೆ ಎನ್.ಎಂ.ಎಸ್.ಎ. ಯೋಜನೆಯಡಿಯಲ್ಲಿ ಹನಿ ನೀರಾವರಿ ಅಳವಡಿಕೆಗೆ ಸಹಾಯಧನಕ್ಕಾಗಿ ಆನ್‌ಲೈನ್‌ನಲ್ಲಿ ಎಷ್ಟು ಅರ್ಜಿಗಳು ಸ್ವೀಕೃತವಾಗಿರುತ್ತವೆ;

ಆ) ಹಾಗಾದರೆ, ಎಷ್ಟು ಅರ್ಜಿಗಳಿಗೆ ಕಾರ್ಯಾದೇಶವನ್ನು ನೀಡಲಾಗಿದೆ; ಈಗ ಕಾರ್ಯಾದೇಶವನ್ನು ನೀಡದಿರಲು ಕಾರಣವೇನು;

ಇ) ಹನಿ ನೀರಾವರಿ ಯೋಜನೆಗಾಗಿ 2014–15ನೇ ಸಾಲಿನಲ್ಲಿ ಎಷ್ಟು ಅನುದಾನವನ್ನು ನಿಗದಿಪಡಿಸಲಾಗಿದೆ;

ಎಷ್ಟು ಖರ್ಚಾಗಿದೆ; ಎಷ್ಟು ಉಳಿಕೆಯಾಗಿದೆ; ಇನ್ನೂ ಎಷ್ಟು ಅನುದಾನದ ಅವಶ್ಯಕತೆ ಇದೆ; (ಸಂಪೂರ್ಣ ಮಾಹಿತಿ ನೀಡುವುದು)?

ಡಾ॥ ಶಾಮನೂರು ಶಿವಶಂಕರಪ್ಪ (ಮಾನ್ಯ ತೋಟಗಾರಿಕೆ ಮತ್ತು ಕೃಷಿ ಮಾರುಕಟ್ಟೆ ಸಚಿವರು)

ಅ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ 2014–15ನೇ ಸಾಲಿಗೆ ಕೇಂದ್ರ ಪುರಸ್ಕೃತ ರಾಷ್ಟ್ರೀಯ ಸುಸ್ಥಿರ ಬೇಸಾಯ ಅಭಿಯಾನ (NMSA-OFWM) ಯೋಜನೆಯಡಿ ಹನಿ ನೀರಾವರಿ ಅಳವಡಿಕೆಗೆ ಸಹಾಯಧನಕ್ಕಾಗಿ **538** ಸಂಖ್ಯೆ ಅರ್ಜಿಗಳು ಆನ್‌ಲೈನ್‌ನಲ್ಲಿ ಸ್ವೀಕೃತವಾಗಿರುತ್ತವೆ.

ಆ) ಮಾಗಡಿ ಕ್ಷೇತ್ರ ವ್ಯಾಪ್ತಿಯಲ್ಲಿ 2014–15ನೇ ಸಾಲಿನ **538** ಅರ್ಜಿಗಳ ಪೈಕಿ ಇಲ್ಲಿಯವರೆಗೆ **133** ಅರ್ಜಿಗಳಿಗೆ ಕಾರ್ಯಾದೇಶಗಳನ್ನು ನೀಡಲಾಗಿದೆ. ಉಳಿದ **405** ಅರ್ಜಿಗಳಿಗೆ ಅನುಮೋದಿತ ಕ್ರಿಯಾ ಯೋಜನೆ ಮಿತಿಯೊಳಗೆ ಘಟಕವಾರು (ಇತರೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ) ಜೇಷ್ಠತೆ ಆಧಾರದ ಮೇರೆಗೆ ಕಾರ್ಯಾದೇಶಗಳನ್ನು ನೀಡಲಾಗುತ್ತಿದೆ.

ಇ)

1. 2014–15ನೇ ಸಾಲಿನಲ್ಲಿ ಮಾಗಡಿ ಕ್ಷೇತ್ರ ವ್ಯಾಪ್ತಿಗೆ **ರೂ. 290.00 ಲಕ್ಷಗಳ** ಅನುದಾನವನ್ನು ನಿಗಧಿಪಡಿಸಲಾಗಿದೆ.

2. ಇದುವರೆಗೆ ಬಿಡುಗಡೆಯಾಗಿರುವ ಅನುದಾನದಲ್ಲಿ **ರೂ. 13.80 ಲಕ್ಷಗಳನ್ನು** ಹಂಚಿಕೆ ಮಾಡಿ **ರೂ. 13.80 ಲಕ್ಷಗಳ** ಪೂರ್ತಿ ಅನುದಾನವನ್ನು ಬಳಕೆ ಮಾಡಲಾಗಿರುತ್ತದೆ. ಯಾವುದೇ ಅನುದಾನ ಉಳಿಕೆಯಾಗಿರುವುದಿಲ್ಲ.

3. ಇತ್ತೀಚೆಗೆ **ರೂ. 150.00 ಲಕ್ಷಗಳನ್ನು** ಸಹ ಹಂಚಿಕೆ ಮಾಡಲಾಗಿದ್ದು, ಇನ್ನೂ ಉಳಿದ **ರೂ. 126.20 ಲಕ್ಷಗಳ** ಅನುದಾನವು ಕೇಂದ್ರ ಹಾಗೂ ರಾಜ್ಯ ಸರ್ಕಾರದಿಂದ ಬಿಡುಗಡೆಯಾದ ನಂತರ ನೀಡಲಾಗುವುದು.

೨೨೦ ಕೆವಿ ಸಬ್ ಸ್ಟೇಷನ್ ಸ್ಥಾಪಿಸುವುದು

639(725); ಶ್ರೀ ಬಾಲಕೃಷ್ಣ ಹೆಚ್.ಸಿ. (ಮಾಗಡಿ)

ಅ) ಮಾಗಡಿ ತಾಲ್ಲೂಕಿಗೆ 220 ಕೆ.ವಿ. ಸಬ್ ಸ್ಟೇಷನ್ ಮಂಜೂರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಹಾಗಾದರೆ, ಕಾಮಗಾರಿಯ ವಿಳಂಬಕ್ಕೆ ಕಾರಣವೇನು; ಯಾವಾಗ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು; ಯಾವಾಗ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಹೌದು.

ಆ) ಮಾಗಡಿ ತಾಲ್ಲೂಕಿನ ತೂಬಿನಕೆರೆ ಗ್ರಾಮದಲ್ಲಿ ಉದ್ದೇಶಿತ 220 ಕೆ.ವಿ. ವಿದ್ಯುತ್ ಉಪ ಕೇಂದ್ರದ ಕಾಮಗಾರಿಯು ದಿನಾಂಕ:29–6–2006 ರಂದು ಮಂಜೂರಾಗಿದ್ದು, ಮೆ: ದೀಪಕ್ ಕೇಬಲ್ಸ್, ಬೆಂಗಳೂರು